## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 430 |
| ಸದಸ್ಯರ ಹೆಸರು | ಶ್ರೀಮತಿ ಎಸ್. ವೀಣಾ ಅಚ್ಚಯ್ಯ |
| ಉತ್ತರಿಸುವ ದಿನಾಂಕ: | 12-12-2018 |
| ಉತ್ತರಿಸುವವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಹಾಗೂ ಭೂಕುಸಿತದಿಂದ ಹಲವಾರು ದೇವಸ್ಥಾನಗಳು ಹಾನಿಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಹಾಗೂ ಭೂ ಕುಸಿತದಿಂದ ಖಾಸಗಿ 2 ದೇವಸ್ಥಾನಗಳು ಹಾನಿಗೊಳಗಾಗಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.<br>• ಮಡಿಕೇರಿ ತಾಲ್ಲೂಕಿನ ಮಡಿಕೇರಿ ಹೋಬಳಿಯ ಮುಕ್ಕೋಡ್ಲು ಗ್ರಾಮದ ಭದ್ರಕಾಳಿ ದೇವಸ್ಥಾನವು ಭಾಗಶಃ ಹಾನಿಗೊಳಗಾಗಿರುತ್ತದೆ.<br>• ಸೋಮವಾರಪೇಟೆ ತಾಲ್ಲೂಕಿನ ಸುಂಟಿಕೊಪ್ಪ ಹೋಬಳಿಯ ಮಾದಾಪುರ ಗ್ರಾಮದ ಅಯ್ಯಪ್ಪ ದೇವಸ್ಥಾನವು ಹಾನಿಗೊಳಗಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಸದರಿ ದೇವಾಲಯಗಳ ದುರಸ್ಥಿ/ಅಭಿವೃದ್ಧಿಗೆ ಇದುವರೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಸದರಿ ದೇವಸ್ಥಾನಗಳು ಖಾಸಗಿ ದೇವಸ್ಥಾನವಾಗಿರುವುದರಿಂದ ದೇವಾಲಯದ ಸಮಿತಿಯವರು ದೇವಾಲಯದ ಅಭಿವೃದ್ಧಿ/ ದುರಸ್ಥಿಗೆ ಸರ್ಕಾರದಿಂದ ಅನುದಾನ ಕೋರಿ ದೇವಾಲಯದ ಸಮಿತಿಯವರು ಪ್ರಸ್ತಾವನೆ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಲಾಗುವುದು. |
| ಇ) | ಯಾವ ಕಾಲಮಿತಿಯೊಳಗೆ ಸದರಿ ದೇವಾಲಯಗಳಿಗೆ ವಿಶೇಷ ಅನುದಾನ ಒದಗಿಸಿ ಅವುಗಳನ್ನು ದುರಸ್ಥಿ/ಅಭಿವೃದ್ಧಿ ಪಡಿಸಲಾಗುವುದು? | ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಲಭ್ಯತೆಗನುಗುಣವಾಗಿ ಬೇಡಿಕೆಗಳನ್ನು ಪರಿಶೀಲಿಸಿ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುವುದು. |

(ಸಂಖ್ಯೆ: ಕಂಇ 140 ಮುಸಪ್ರ 2018)

**ರಾಜಶೇಖರ.ಬಿ.ಪಾಟೀಲ**
(ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು)